ಮೇಲ್ವಿಚಾರಣೆ ಮಾಡುವ ಸಮಿತಿಗಳಾದರೂ ಅಷ್ಟೆ; ಮಾನಸಿಕ ಆರೋಗ್ಯದ ಬಗ್ಗೆ ಅಧ್ಯಯನ ನಡೆಸಿದವರಿಗಿಂತ, ಮಾನಸಿಕ ರೋಗಚಿಕಿತ್ಸೆಯ ಬಗ್ಗೆ ಏನೂ ಅರಿವಿರದ, ಮನೋರೋಗಿಗಳ ಬಗ್ಗೆ ಬಹು ಹಳೆಯ ಧೋರಣೆಗಳನ್ನೇ ಉಳಿಸಿಕೊಂಡಂತಹ ಇತರ ಕ್ಷೇತ್ರಗಳ ಪರಿಣಿತರು, ಹಲವು ಬಾರಿ ಯಾವ ಕ್ಷೇತ್ರದಲ್ಲಿಯೂ ಪರಿಣಿತರಾಗದ ಅಧಿಕಾರ ಮಾತ್ರವಿರುವ ವ್ಯಕ್ತಿಗಳು ಇವರಿಂದ ಕೂಡಿರುತ್ತದೆ.

## ಮಾನಸಿಕ ಆರೋಗ್ಯ ಆರೈಕೆ ಕಾನೂನು

ಈಗಷ್ಟೇ **Mental health care bill 2013** ಬರುತ್ತಿದೆ. ಒಟ್ಟು 16 ಅಧ್ಯಾಯಗಳ, 137 ಅಂಶಗಳ ದೀರ್ಘವಾದ ಕಾನೂನು ಇದು. ಇದರ ಸ್ವಾಗತಾರ್ಹ ಅಂಶಗಳು ಹಲವಾದರೆ, ವಿವಾದಕ್ಕೊಳಗಾಗಿರುವ ಅಂಶಗಳು ಇನ್ನು ಕೆಲವು. ಮಾನಸಿಕ ಕಾಯಿಲೆಯೆಂದರೆ ಏನು ಎನ್ನುವುದನ್ನು ಇದು ನಿಖರವಾಗಿ, ವೈಜ್ಞಾನಿಕವಾಗಿ ಗುರುತಿಸಿದೆ. '**Advance directive**' ಎಂಬ ಶೀರ್ಷಿಕೆಯಡಿ ಅದು ಮಾನಸಿಕ ರೋಗಿಗೆ ತನ್ನ ಚಿಕಿತ್ಸೆ ಪಡೆಯುವ/ಪಡೆಯದಿರುವ ಹಕ್ಕನ್ನು ನೀಡುತ್ತದೆ. ಇಲ್ಲಿಯವರೆಗೆ ಇನ್ಶೂರೆನ್ಸ್ ಕಂಪೆನಿಗಳು ಸೇರಿಸಲು ಒಪ್ಪದಿದ್ದ ಮಾನಸಿಕ ಕಾಯಿಲೆಯನ್ನೂ ಇನ್ಶೂರೆನ್ಸ್ ಪಟ್ಟಿಯಲ್ಲಿ ಸೇರಿಸಬೇಕೆಂದು ಈ ಕಾನೂನು ಹೇಳುತ್ತದೆ. ಚಿಕಿತ್ಸೆಯ ಬಗೆಗಿನ ಸಂಪೂರ್ಣ ಮಾಹಿತಿ ಪಡೆದುಕೊಳ್ಳುವ ಹಕ್ಕು ರೋಗಿಯದ್ದು, ಅಮಾನವೀಯ ಆರೈಕೆಯ ಕ್ರಮಗಳಿಗೆ ಕಠಿಣ ಶಿಕ್ಷೆ ಸೂಚಿಸಲಾಗಿದೆ. ಆತ್ಮಹತ್ಯೆಯ ಪ್ರಯತ್ನ ಮಾನಸಿಕ ಅನಾರೋಗ್ಯದಿಂದ ಆಗಿದೆ ಎಂದು ಮನೋವೈದ್ಯಕೀಯ ಪರೀಕ್ಷೆಯಿಂದ ದೃಢಪಟ್ಟರೆ, ಆಗ ಆತ್ಮಹತ್ಯೆಯನ್ನು 'ಅಪರಾಧ' ಎಂದು ಪರಿಗಣಿಸುವಂತಿಲ್ಲ ಎಂದು ಈ ಕಾನೂನು ವಿವರಿಸುತ್ತದೆ.

ಆದರೆ ಈ ಮಹತ್ವಾಕಾಂಕ್ಷೆಯ 'ಬಿಲ್' ಮಹತ್ವದ ಬದಲಾವಣೆಗಳನ್ನು ತರುವುದು ಅನುಮಾನವೇ. ಅದಕ್ಕೂ  ಕಾರಣಗಳಿವೆ. ಈ ಕಾನೂನು ಮುಂದಿಡುವುದು ಭಾರತದ ಇಡೀ ಮಾನಸಿಕ ಆರೋಗ್ಯ ವ್ಯವಸ್ಥೆಯನ್ನು ಏಕಾಏಕಿ ಬದಲಿಸುವತ್ತ. ಅದು ಮುಂದಿಟ್ಟಿರುವ ಹೊಸ ಹೊಸ ಸಮಿತಿಗಳನ್ನು

## ಕಾನೂನಿನ ದುರುಪಯೋಗ

ಮಾನಸಿಕ ಕಾಯಿಲೆಗಳನ್ನು ದುರುಪಯೋಗಪಡಿಸಿಕೊಳ್ಳುವ ಸಂದರ್ಭಗಳೂ ಇಲ್ಲದಿಲ್ಲ. 70ರ ವಯಸ್ಸಿನ ವೃದ್ಧರೊಬ್ಬರನ್ನು ಕರೆತಂದಿದ್ದರು. ಅವರು 'ವಿಲ್' ಮಾಡಿಯಾಗಿತ್ತು. ಆ ವಿಲ್ ಮಕ್ಕಳಿಗೆ ಸರಿ ಹೊಂದುವಂತಿರಲಿಲ್ಲ. ಮಕ್ಕಳ ಬೇಡಿಕೆ ಎಂದರೆ– 'ಇವರ ಬುದ್ಧಿ ಸರಿಯಿಲ್ಲ ಅಂತ ಸರ್ಟಿಫಿಕೇಟ್ ಕೊಟ್ಬಿಡಿ ಡಾಕ್ಟ್ರೇ!' 70 ವರ್ಷಗಳಾಗಿದ್ದರೂ ಮಾನಸಿಕವಾಗಿ ಸ್ವಸ್ಥರಾಗಿದ್ದ ವೃದ್ಧರಿಗೆ 'ಬುದ್ಧಿ ಸರಿಯಾಗಿದೆ' ಎಂದು ಹೇಳಿ ಹಿಂದಿರುಗುವಂತೆ ಹೇಳಿದೆ.

ವಿಲ್ ಮಾಡುವಾಗ ಮಾನಸಿಕ ಅಸ್ವಸ್ಥತೆಯಿದ್ದರೆ ಅದು ಊರ್ಜಿತವಾಗದೆಂಬ ನಿಯಮದ ದುರುಪಯೋಗವಾಗುವ ಪರಿಯಿದು. ಇಂತಹ ಹಲವು ಸಂದರ್ಭಗಳು ರಾಜಕೀಯವಾಗಿ, ಪ್ರಭಾವವಿರುವ ವ್ಯಕ್ತಿಗಳ ಅಪರಾಧಗಳ ಸಮಯದಲ್ಲಿ ಬರುತ್ತವೆ. 'ಇಂಥದ್ದೇ ನಾಟಕದ ಕಾರಣದಿಂದ ದಾಖಲಾಗಿದ್ದಾರೆ' ಎಂಬ ಅರಿವು ಜನಸಾಮಾನ್ಯರಿಗೂ ಇದ್ದರೂ ವೈದ್ಯರು, ಪೋಲೀಸರು, ನ್ಯಾಯಾಂಗ ಎಲ್ಲರ ಕೈಗಳನ್ನು ಕಟ್ಟಿಹಾಕಿ ಕಾನೂನಿನ ದುರುಪಯೋಗ ಉಂಟಾಗುತ್ತದೆ.

ರೂಪಿಸಲು ದೊಡ್ಡ ಆರ್ಥಿಕ ಮಾನವ ಸಂಪನ್ಮೂಲ ಮತ್ತು ಯೋಜನೆಯ ಬೆಂಬಲ ಅಗತ್ಯವಿದೆ. ಇದಲ್ಲದೆ ಭಾರತದಂತಹ ದೊಡ್ಡ ರಾಷ್ಟ್ರದಲ್ಲಿ ನಮ್ಮ ಬಹುತೇಕ ರೋಗಿಗಳು ಗ್ರಾಮೀಣ ಹಿನ್ನೆಲೆಯವರು. ಇಲ್ಲಿ ತಂದೆ– ಮಕ್ಕಳ ರೀತಿಯ ಡಾಕ್ಟರ್– ರೋಗಿಯ ಸಂಬಂಧವಿನ್ನೂ ಪ್ರಚಲಿತವೇ. ವೈದ್ಯನಿಗೇ ನಿರ್ಧಾರವನ್ನು ಬಿಡುವ, ನಂಬುವ, ವಿಶ್ವಾಸವಿಡುವ ರೀತಿ ಚಿಕಿತ್ಸೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

ಈ ಕಾನೂನಿನಲ್ಲಿ 'ರೋಗಿಯ ಹಕ್ಕು' ಎಂದು ಕರೆಯಲ್ಪಡುವ ಹಕ್ಕುಗಳು

